# ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ

## ಬೆಂಗಳೂರು

**ಹೆಚ್.ಆರ್.ಸಿ.ಸಂಖ್ಯೆ: 1655/10/24/2021(SB-3)**

**ದಿನಾಂಕ: 13-05-2022**

**ಉಪಸ್ಥಿತರು: ಶ್ರೀ ಆರ್.ಕೆ.ದತ್ತ, ಮಾನ್ಯ ಸದಸ್ಯರು**

**ದೂರುದಾರರು:**

ಶ್ರೀ ನಾಗರಾಜ ಬಿನ್ ಮುದುಕಪ್ಪಾ ಪಟ್ಟಣಶೆಟ್ಟಿ,
ಸಾ: ಮಂಗಳೂರು, ಕುಕನೂರು ತಾಲ್ಲೂಕು,
ಕೊಪ್ಪಳ ಜಿಲ್ಲೆ
ದೂ: 7338271747

## ಆದೇಶ

ಶ್ರೀ ನಾಗರಾಜ ಬಿನ್ ಮುದಕಪ್ಪ ಪಟ್ಟಣಶೆಟ್ಟಿ ಅವರು ಆಯೋಗಕ್ಕೆ ದೂರು ಸಲ್ಲಿಸಿ, ದಿನಾಂಕ: 28.02.2021 ರಂದು ದೂರುದಾರರು, ಅವರ ತಾಯಿ ಮತ್ತು ಅಕ್ಕ ದೂರುದಾರರ ಅಪ್ಪ ಮತ್ತು ಆತನ ಸಂಬಂಧಿಕರಿಂದ ಹಲ್ಲೆಗೊಳಗಾಗಿ ದೂರು ಕೊಡಲು ಬೇವೂರು ಆರಕ್ಷಕ ಠಾಣೆಗೆ ಹೋದಾಗ ದೂರು ಸ್ವೀಕರಿಸದೇ ನಿರಾಕರಿಸಿದ್ದಾಗಿ ಬೇವೂರ ಆರಕ್ಷಕ ಠಾಣೆಯ ಪಿ.ಎಸ್.ಐ ಕುಮಾರಿ ಶೀಲಾ ಇವರ ವಿರುದ್ಧ ಮಾನವ ಹಕ್ಕುಗಳ ಆಯೋಗಕ್ಕೆ ಕಾನೂನು ಕ್ರಮ ತೆಗೆದುಕೊಳ್ಳುವ ಬಗ್ಗೆ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಸದರಿ ದೂರಿನ ಬಗ್ಗೆ ದಿನಾಂಕ: 04.10.2021 ರಂದು ಆರಕ್ಷಕ ಅಧೀಕ್ಷಕರು, ಕೊಪ್ಪಳ ಜಿಲ್ಲೆ, ಕೊಪ್ಪಳ ಅವರು ಆಯೋಗಕ್ಕೆ ವರದಿ ಸಲ್ಲಿಸಿ, ದಿನಾಂಕ: 28.02.2021 ರಂದು ಅರ್ಜಿದಾರರಾದ ನಾಗರಾಜ ಪಟ್ಟಣಶೆಟ್ಟಿ ಮತ್ತು ಸಂಬಂಧಿಕರು ತನ್ನ ತಂದೆಯಿಂದ ಹಲ್ಲೆಗೆ ಒಳಗಾಗಿ ತೊಂದರೆಗೀಡಾಗಿದ್ದರೂ ಸಹ ದಿನಾಂಕ: 13.03.2021ರ ಘಟನೆಯ ಪೂರ್ವದಲ್ಲಿ ಸೂಕ್ತ ಕಾನೂನು ಕ್ರಮ ಜರುಗಿಸದೇ, ಹೆಚ್.ಸಿ-72 ಚನ್ನಪ್ಪ, ಎ.ಎಸ್.ಐ ಬಸವರಾಜ ಲಾಡಿ (ಸದ್ಯ ನಿವೃತ್ತ) ಮತ್ತು ಕುಮಾರಿ ಶೀಲಾ ಪಿ.ಎಸ್.ಐ ರವರುಗಳು ಕರ್ತವ್ಯದಲ್ಲಿ ನಿರ್ಲಕ್ಷತನ ತೋರಿದ್ದು ವಿಚಾರಣೆಯಲ್ಲಿ ಕಂಡು ಬಂದಿರುತ್ತದೆ.

ದಿನಾಂಕ: 13.03.2021 ರಂದು ನಡೆದ ಹಲ್ಲೆಯ ಘಟನೆಯಲ್ಲಿ ಅರ್ಜಿದಾರರಾದ ನಾಗರಾಜ ಪಟ್ಟಣಶೆಟ್ಟಿ, ರೇಣುಕಮ್ಮ ಪಟ್ಟಣಶೆಟ್ಟಿ ಮತ್ತು ನಿಂಗಮ್ಮ ಪಟ್ಟಣಶೆಟ್ಟಿ ರವರು ಗಾಯಗೊಂಡಿದ್ದು, ಸದರಿ

ಘಟನೆಗೆ ಸಂಬಂಧಪಟ್ಟಂತೆ ಬೇವೂರ ಆರಕ್ಷಕ ಠಾಣೆಯಲ್ಲಿ ಗುನ್ನೆ ನಂ.19/2021 ಕಲಂ 143, 147, 148, 323, 324, 504, 506 ಸಹಿತ 149 ಐಪಿಸಿ ನೇದ್ದರಲ್ಲಿ ಪ್ರಕರಣ ದಾಖಲಾಗಿ ತನಿಖೆ ಪೂರ್ಣಗೊಂಡು ಸದರಿ ಪ್ರಕರಣದಲ್ಲಿ ದೋಷರೋಪಣ ಪಟ್ಟಿ ಸಲ್ಲಿಸಿದ್ದು, ಸದ್ಯ ಮಾನ್ಯ ಜೆ.ಎಂ.ಎಫ್.ಸಿ ನ್ಯಾಯಾಲಯ ಯಲಬುರ್ಗಾ ರವರ ಮುಂದೆ ವಿಚಾರಣೆ ಹಂತದಲ್ಲಿರುತ್ತದೆ.

ಅರ್ಜಿದಾರರು ತನಗೆ ಮತ್ತು ತನ್ನ ತಾಯಿಗೆ ಸೇರಬೇಕಾದ ಆಸ್ತಿಯ ವಿಷಯವನ್ನು ಇಟ್ಟುಕೊಂಡು ತನ್ನ ತಂದೆಯೊಂದಿಗೆ ದಿನಾಂಕ: 28.02.2021 ರಂದು ಜಗಳ ಮಾಡಿ ಹಲ್ಲೆಗೊಳಲಾಗಿದ್ದು, ಕೂಡಲೇ ಸದರಿ ಘಟನೆಗೆ ಸಂಬಂಧಿಸಿದಂತೆ ತಪ್ಪಿತಸ್ಥರ ವಿರುದ್ದ ಸೂಕ್ತ ಕಾನೂನು ಕ್ರಮ ಕೈಗೊಂಡು ಮುಂಜಾಗ್ರತವಾಗಿ ಕಲಂ 107 ಸಿ.ಆರ್.ಪಿ.ಸಿ ಅಡಿ ಕ್ರಮ ಜರುಗಿಸಿದ್ದಲ್ಲಿ, ದಿನಾಂಕ: 13.03.2021 ರಂದು ನಡೆದ ಹಲ್ಲೆಯ ಅಪರಾಧವನ್ನು ತಪ್ಪಿಸಬಹುದಾಗಿತ್ತು. ದಿನಾಂಕ: 28.02.2021 ರಂದು ನಡೆದ ಘಟನೆಯ ಬಗ್ಗೆ ಬೇವೂರು ಠಾಣೆಯ ಮೇಲ್ಕಂಡ ಅಧಿಕಾರಿ ಮತ್ತು ಸಿಬ್ಬಂಧಿಯವರಿಗೆ ಮಾಹಿತಿ ಪಡೆದಾಗ್ಯೂ ಸಹ ಯಾವುದೇ ಕ್ರಮ ಕೈಗೊಳ್ಳದೇ ನಿರ್ಲಕ್ಷ ವಹಿಸಿರುವುದು ವಿಚಾರಣೆಯಲ್ಲಿ ಕಂಡು ಬಂದಿರುತ್ತದೆ.

ಅರ್ಜಿದಾರರು ಮತ್ತು ಪ್ರತಿ ಅರ್ಜಿದಾರರ ನಡುವೆ ಇರುವ ಆಸ್ತಿಯ ಹಂಚಿಕೆಯ ವಿಭಾಗದ ವಿಷಯವು ನೈಜವಾಗಿ ಸಿವಿಲ್ ಸ್ವರೂಪವಾಗಿದ್ದು, ಈಗಾಗಲೇ ಮಾನ್ಯ ಸಿಜೆ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಯಲಬುರ್ಗಾ ರವರಲ್ಲಿ ಓ.ಎಸ್ ನಂ.330/2020 ನೇದ್ದರಲ್ಲಿ ವಿಚಾರಣೆ ಹಂತದಲ್ಲಿರುತ್ತದೆ. ಆ ದಿವಸ ಘಟನೆಯ ಸಮಯದಲ್ಲಿ ಹೊಲದಲ್ಲಿ ರಾಬರಿಯಾಗಿರುವ ಬಗ್ಗೆ ವಿಚಾರಣೆಯಲ್ಲಿ ಸಾಬೀತಾಗಿರುವುದಿಲ್ಲ.

ಸದರಿ ಅರ್ಜಿ ವಿಚಾರಣೆಯಲ್ಲಿ, ಅರ್ಜಿದಾರರಾದ ಶ್ರೀ ನಾಗರಾಜ ತಂದೆ ಮುದಕಪ್ಪ ಪಟ್ಟಣಶೆಟ್ಟಿ, ಅರ್ಜಿದಾರರ ತಾಯಿ ಶ್ರೀಮತಿ ರೇಣುಕಮ್ಮ ಗಂಡ ಮುದಕಪ್ಪ ಪಟ್ಟಣಶೆಟ್ಟಿ, ಹಾಗೂ ಸಹೋದರಿ ನಿಂಗಮ್ಮ ತಂದೆ ಮುದಕಪ್ಪ ಪಟ್ಟಣಶೆಟ್ಟಿ, ಇವರು ದಿನಾಂಕ: 04.08.2021 ರಂದು ನೀಡಿದ ಲಿಖಿತ ಹೇಳಿಕೆಯಲ್ಲಿ ನಮೂದಿಸಿದ ಆರೋಪಗಳಲ್ಲಿ ದಿನಾಂಕ: 28.02.2021 ರಂದು ನಡೆದ ಘಟನೆ ಬಗ್ಗೆ ಬೇವೂರು ಆರಕ್ಷಕ ಠಾಣೆಯ ಅಧಿಕಾರಿ ಮತ್ತು ಸಿಬ್ಬಂದಿಯವರು ಕಾನೂನು ಕ್ರಮ ಜರುಗಿಸದೇ ಇದ್ದುದರಿಂದ ಪುನಃ ತನ್ನ ತಂದೆಯು ತನ್ನ ಸಂಬಂಧಿಕರೊಂದಿಗೆ ಬಂದು ದೂರುದಾರರ ತಾಯಿಯ ಮೇಲೆ ಹಲ್ಲೆ ಮಾಡುತ್ತಿರುತ್ತಾರೆ ಎಂಬ ಆರೋಪ ಮಾತ್ರ ನಿಜವಿರುತ್ತದೆ.

ಅರ್ಜಿದಾರರ ಇಚ್ಛೆಯಂತೆ ಪೊಲೀಸ್ ಅಧಿಕಾರಿಗಳು ಅಥವಾ ಇತರೇ ಇಲಾಖೆಯ ಅಧಿಕಾರಿಗಳು ಕ್ರಮ ಕೈಗೊಳ್ಳದೆ ಇರುವುದಕ್ಕೆ, ಅಧಿಕಾರಿಗಳ ವಿರುದ್ದ ಆರೋಪ ಮಾಡುವ ಪ್ರವೃತ್ತಿ ಹೊಂದಿರುವಂತೆ ಕಂಡು ಬರುತ್ತದೆಂದು ವರದಿಯನ್ನು ಮಾಡಿದ್ದಾರೆ.

ಸದರಿ ವರದಿಯ ಪ್ರತಿಯನ್ನು ದೂರುದಾರರಿಗೆ ಅಭಿಪ್ರಾಯಕ್ಕಾಗಿ ಕಳುಹಿಸಿದ್ದು, ದಿನಾಂಕ: 12.01.2022 ರಂದು ಕೆಳಕಂಡಂತೆ ಅಭಿಪ್ರಾಯವನ್ನು ಸಲ್ಲಿಸಿದ್ದು, ಅವರ ಅಭಿಪ್ರಾಯದಲ್ಲಿ "ನಮಗೆ ಪೊಲೀಸರು ರಕ್ಷಣೆ ನೀಡುವಲ್ಲಿ ಪೊಲೀಸರು ನಿರ್ಲಕ್ಷತನ ತೋರುತ್ತಾರೆ ಮತ್ತು ದುಷ್ಕರ್ಮಿಗಳಿಂದ ನಮಗೆ ದೋಷವಾಗುವತನಕ ಸಂವಿಧಾನವನ್ನು ನಿರ್ಲಕ್ಷಿಸುತ್ತಾರೆ. ನನ್ನ ಅಕ್ಕ ಕೂಡ ಘಟನೆಯಲ್ಲಿ ತೀವ್ರವಾಗಿ ಗಾಯಗೊಂಡಿದ್ದು ಈಗಲೂ ಸಹ ರಕ್ತ ಹೀನತೆ ಮುಂತಾದ ಅಡ್ಡ ಪರಿಣಾಮಗಳನ್ನು ಅನುಭವಿಸುತ್ತಾ ಇದ್ದಾರೆ ಮತ್ತು ನನ್ನ ಅಕ್ಕನ ಮಾನ ಮರ್ಯಾದೆಗೆ ಕೂಡ ಧಕ್ಕೆಯುಂಟಾಗಿದೆ. ಈ ಎಲ್ಲಾ ಕಾರಣಗಳಿಗೂ ಆರಕ್ಷಕ ಅಧೀಕ್ಷಕರು, ಆರಕ್ಷಕ ಉಪಾಧೀಕ್ಷಕರು, ಆರಕ್ಷಕ ವೃತ್ತ ನಿರೀಕ್ಷಕರು ಮತ್ತು ಆರಕ್ಷಕ ಉಪ ನಿರೀಕ್ಷಕರು ಹೊಣೆಗಾರರಾಗಿರುತ್ತಾರೆ ಮತ್ತು ಆರಕ್ಷಕ ಉಪ ನಿರೀಕ್ಷಕರು ಶೀಲಾ ರವರು ಮುಖ್ಯ ಹೊಣೆಗಾರರಾಗಿದ್ದಾರೆ.

ನನ್ನ ತಂದೆ ಮುದಕಪ್ಪ ಪಟ್ಟಣಶೆಟ್ಟಿ ಮತ್ತು ನನ್ನ ಅಜ್ಜಿ ಈರಮ್ಮ ಪಟ್ಟಣಶೆಟ್ಟಿ ಆಗಲೇ ಸಿವಿಲ್ ದಾವೆ ನಂ.330/2020 ಹೂಡಿದ್ದರೂ ಮತ್ತು ಹಿರಿಯ ನಾಗರಿಕ ಪಾಲನೆ ಪೋಷಣೆ ದಾವೆಯನ್ನು ನಮ್ಮ ಮೇಲೆ ಹೂಡಿದ್ದರೂ ಸಹ ಇದರ ಮಾಹಿತಿ ಪಿ.ಎಸ್.ಐ ಶೀಲಾ ಮೇಡಂ ಗೆ ಇದ್ದಾಗ್ಯೂ ಸಹ ಮತ್ತೆ ದಿನಾಂಕ: 13.03.2021 ರಂದು ನಮ್ಮ ಮೇಲೆ ಹಲ್ಲೆ, ದೌರ್ಜನ್ಯ ಮತ್ತು ಲೈಂಗಿಕ ಕಿರಕುಳ ಕೊಟ್ಟರೂ ಸಹ ಆರೋಪಿಗಳ ಮೇಲೆ ಹಾಕಿರುವ ಸೆಕ್ಷನನ್ನು ನ್ಯಾಯಾಲಯ ಗಮನಿಸಬೇಕಾಗಿ ವಿನಂತಿಸಿಕೊಳ್ಳುತ್ತೇವೆ.

ನಮಗೆ ಇನ್ನೊಂದು ಸಂಶಯವೇನೆಂದು ದಿನಾಂಕ: 13.03.2021 ರಂದು ನಡೆದ ಘಟನೆಗೆ ಸಂಬಂಧಿಸಿದಂತೆ ಪಿ.ಎಸ್.ಐ ಶೀಲಾ ಮೇಡಂ ಯಾವ ಎಮ್.ಎಲ್.ಸಿ ಯನ್ನು ತೆಗೆದುಕೊಂಡು ಕ್ರಮ ತೆಗೆದುಕೊಂಡಿದ್ದಾರೆ ಎಂಬುದು ಯಾಕೆಂದರೆ ಆ ದಿನ ಬೇವೂರ ಸರ್ಕಾರಿ ಆಸ್ಪತ್ರೆಯಲ್ಲಿ ಡಾಕ್ಟರ್ ಇಲ್ಲದಿದ್ದರಿಂದ ನಾವುಗಳು ಕೊಪ್ಪಳ ಜಿಲ್ಲಾ ಆಸ್ಪತ್ರೆಯಲ್ಲಿ ಹೋಗಿ ಎಮ್.ಎಲ್.ಸಿ ಮಾಡಿಸಿರುತ್ತೇವೆ.

ನಮ್ಮ ಈ ಪ್ರಕರಣದಲ್ಲಿ ಕೊಪ್ಪಳ ಎಸ್.ಪಿ, ಬೇವೂರ ಪಿ.ಎಸ್.ಐ ಮತ್ತು ಇನ್ನಿತರ ಕೊಪ್ಪಳ ಪೊಲೀಸರು ನಮ್ಮ ಮೇಲೆ ತುಂಬಾ ಸಿಟ್ಟಾಗಿರುವುದರಿಂದ ಮುಂದಿನ ತನಿಖೆಯನ್ನು ಕೇಂದ್ರ ಪೊಲೀಸ ಇಲಾಖೆಗೆ ಅಥವಾ ಗುಪ್ತಚರ ಇಲಾಖೆಗೆ ಒಪ್ಪಿಸಬೇಕೆಂದು ಬೇಡಿಕೊಳ್ಳುತ್ತಿದ್ದೇವೆ.

ಇಸ್ಪೇಟ್ ಆಡುವದು, ನನ್ನ ತಾಯಿ ಮೇಲೆ ಹಲ್ಲೆ ನಡೆಸೋದು ಮತ್ತು ನನ್ನ ಪಿತ್ರಾರ್ಜಿತ ಆಸ್ತಿಯ ಮೇಲೆ ಸಾಲ ಮಾಡೋದು ಈ ಎಲ್ಲವನ್ನು ಪ್ರಶ್ನಿಸಿದ್ದಕ್ಕೆ ನಮ್ಮ ಮೇಲೆ 330/2020 ಸಿವಿಲ್ ದಾವೆಯನ್ನು ಹೊರಡಿಸಿದ್ದಾರೆ.

ಕರ್ತವ್ಯ ಬ್ರಷ್ಟರಾದ ಪಿ.ಎಸ್.ಐ ಶೀಲಾ ಮೇಡಂ, ಬಸವರಾಜ ಲಾಡಿ (ನಿವೃತ್ತರು) ಮತ್ತು ಚನ್ನಪ್ಪ ರವರಿಗೆ ಕಾನೂನಾತ್ಮಕ ಕಠಿಣ ಕ್ರಮ ನೀಡಬೇಕು, ಮತ್ತು ದಿನಾಂಕ: 13.03.2021 ರಲ್ಲಿ ನಡೆದ ಘಟನೆಯಲ್ಲಿ ಇವರ ಭಾಗಿತ್ವವನ್ನು ಪರಿಶೀಲಿಸಬೇಕೆಂದು ಮಾನ್ಯರಲ್ಲಿ ಕೇಳಿಕೊಳ್ಳುತ್ತೇನೆ."

ದೂರು, ಆರಕ್ಷಕ ಅಧೀಕ್ಷಕರು ಅವರ ವರದಿ ಮತ್ತು ವರದಿಯ ಮೇಲೆ ದೂರುದಾರರು ಆಯೋಗಕ್ಕೆ ಸಲ್ಲಿಸಿರುವ ಅಭಿಪ್ರಾಯವನ್ನು ಪರಿಶೀಲಿಸಲಾಗಿ, ದಿನಾಂಕ: 28.02.2021 ರಂದು ಅರ್ಜಿದಾರರಾದ ನಾಗರಾಜ ಪಟ್ಟಣಶೆಟ್ಟಿ ಮತ್ತು ಸಂಬಂಧಿಕರು ತನ್ನ ತಂದೆಯಿಂದ ಹಲ್ಲೆಗೆ ಒಳಗಾಗಿ ತೊಂದರೆಗೀಡಾಗಿದ್ದರೂ ಸಹ ದಿನಾಂಕ: 13.03.2021ರ ಘಟನೆಯ ಪೂರ್ವದಲ್ಲಿ ಸೂಕ್ತ ಕಾನೂನು ಕ್ರಮ ಜರುಗಿಸದೇ, ಹೆಚ್.ಸಿ–72 ಚನ್ನಪ್ಪ, ಎ.ಎಸ್.ಐ ಬಸವರಾಜ ಲಾಡಿ (ಸದ್ಯ ನಿವೃತ್ತ), ಮತ್ತು ಕುಮಾರಿ ಶೀಲಾ ಪಿ.ಎಸ್.ಐ ರವರುಗಳು ಕರ್ತವ್ಯದಲ್ಲಿ ನಿರ್ಲಕ್ಷತನ ತೋರಿದ್ದು ವಿಚಾರಣೆಯಲ್ಲಿ ಕಂಡು ಬಂದಿರುತ್ತದೆ.

ಆದುದರಿಂದ ಈ ಬಗ್ಗೆ ಹೇಳುವುದೇನಾದರೂ ಇದ್ದಲ್ಲಿ ದಿನಾಂಕ: 14.03.2022 ರಂದು 12.00 ಗಂಟೆಗೆ ಆಯೋಗದ ಮುಂದೆ ಖುದ್ದಾಗಿ ಲಿಖಿತ ಸಮಜಾಯಿಷಿ ಸಲ್ಲಿಸುವಂತೆ ಕುಮಾರಿ ಶೀಲಾ ಮೂಗನಗೌಡ್ರ, ಪಿ.ಎಸ್.ಐ, ಬೇವೂರ ಆರಕ್ಷಕ ಠಾಣೆ, ಬಸವರಾಜ ಲಾಡಿ, ಸಹಾಯಕ ಆರಕ್ಷಕ ನಿರೀಕ್ಷಕರು, ಬೇವೂರ ಆರಕ್ಷಕ ಠಾಣೆ ಮತ್ತು ಶ್ರೀ ಚನ್ನಪ್ಪ, ಸಿ.ಹೆಚ್.ಸಿ: 72, ಬೇವೂರ ಆರಕ್ಷಕ ಠಾಣೆ ಅವರಿಗೆ ಪಿ.ಎಚ್.ಆರ್ ಆಕ್ಟ್ 1993 ಕಲಂ 16ರ ಅಡಿ ಕಾರಣ ಕೇಳುವ ನೋಟೀಸು ನೀಡುವಂತೆ ಹಾಗೂ ಸದರಿ ದಿನಾಂಕದಂದು ಆಯೋಗದ ಮುಂದೆ ವಿಚಾರಣೆಗೆ ಹಾಜರಾಗುವಂತೆ ಆರಕ್ಷಕ ಅಧೀಕ್ಷಕರು, ಕೊಪ್ಪಳ ಜಿಲ್ಲೆ, ಕೊಪ್ಪಳ ಮತ್ತು ದೂರುದಾರರಿಗೂ ಸಹ ಸೂಚಿಸಿದ್ದು, ಅದರಂತೆ ದಿನಾಂಕ:

14.03.2022 ರಂದು ದೂರುದಾರರಾದ ಶ್ರೀ ನಾಗರಾಜ, ಪಿ.ಎಸ್.ಐ ಶ್ರೀಮತಿ ಶೀಲಾ ಮೂಗನಗೌಡ್ರ, ಎ.ಎಸ್.ಐ ಶ್ರೀ ಬಸವರಾಜ ಲಾಡಿ, ಹೆಡ್ ಕಾನ್ಸ್‌ಟೇಬಲ್ ಶ್ರೀ ಚನ್ನಪ್ಪ, ಪೊಲೀಸ್ ಅಧೀಕ್ಷಕರ ಕಚೇರಿಯಿಂದ ಪೊಲೀಸ್ ಇನ್ಸ್‌ಪೇಕ್ಟರಾದ ಶ್ರೀ ಅಯ್ಯನಗೌಡ ಪಾಟೀಲ ಮತ್ತು ಶ್ರೀ ನಾಗರೆಡ್ಡಿ, ಸಿ.ಪಿ.ಐ ರವರು ಆಯೋಗದ ಮುಂದೆ ಹಾಜರಾಗಿದ್ದು, ಶ್ರೀ ಅಯ್ಯನಗೌಡ ಪಾಟೀಲ ರವರು ದಿನಾಂಕ: 11.03.2022 ರ ಪೊಲೀಸ್ ಅಧೀಕ್ಷಕರು, ಕೊಪ್ಪಳ ಜಿಲ್ಲೆ ರವರ ವರದಿಯನ್ನು ಸಲ್ಲಿಸಿರುತ್ತಾರೆ. ಶ್ರೀ ಬಸವರಾಜ ಲಾಡಿ ರವರು ಅವರ ಲಿಖಿತ ಸಮಜಾಯಿಷಿಯನ್ನು ಸಲ್ಲಿಸಿರುತ್ತಾರೆ. ದೂರುದಾರರಾದ ಶ್ರೀ ನಾಗರಾಜು ರವರು ಅವರ ಹೇಳಿಕೆಯನ್ನು ಆಯೋಗದ ಮುಂದೆ ನೀಡಿರುತ್ತಾರೆ.

ದಿನಾಂಕ: 14.03.2022 ರಂದು ದೂರುದಾರರಾದ ಶ್ರೀ ನಾಗರಾಜು ರವರು ಹೇಳಿರುವ ಹೇಳಿಕೆ ಈ ಕೆಳಕಂಡಂತೆ ಇರುತ್ತದೆ:

> "ಮಂಗಳೂರಿನಲ್ಲಿ ನಮ್ಮ ಪಿತ್ರಾರ್ಜಿತ ಆಸ್ತಿ 4 ಎಕರೆ 32 ಗುಂಟೆ ಜಮೀನು ಇದೆ. ಇದರಲ್ಲಿ ವ್ಯವಸಾಯ ಮಾಡುತ್ತೇವೆ. ನಮ್ಮ ತಂದೆಯವರು 18 ವರ್ಷಗಳ ಹಿಂದೆ ಮನೆ ಬಿಟ್ಟು ಹೋಗಿ ಬೇರೆ ಒಂದು ಮದುವೆ ಮಾಡಿಕೊಂಡು ಮನೆ ಮಾಡಿಕೊಂಡಿದ್ದರು. ಮನೆಯಲ್ಲಿ ನಾನು, ನನ್ನ ತಾಯಿ, ನನ್ನ ಅಕ್ಕ, ನಮ್ಮ ಅಣ್ಣ ಹಾಗೂ ನಮ್ಮ ಅಜ್ಜಿ (ನಮ್ಮ ತಂದೆಯವರ ತಾಯಿ) ಇದ್ದೆವು. ಈ ಹೊಲದ ಸಂಬಂಧವಾಗಿ ನನ್ನ ತಂದೆ ಸಿಜೆ ಮತ್ತು ಜೆಎಮ್‌ಎಫ್‌ಸಿ ನ್ಯಾಯಾಲಯ ಯಲಬುರ್ಗಿಯಲ್ಲಿ ಓ.ಎಸ್ ನಂ.330/2020 ಪ್ರಕರಣವನ್ನು ಹೂಡಿದ್ದಾರೆ.
>
> ದಿನಾಂಕ: 07.04.2020 ರಂದು ಸಾಯಂಕಾಲ 4.30 ಗಂಟೆಗೆ ನನ್ನ ತಾಯಿ ಹೊಲದಲ್ಲಿ ಕೆಲಸ ಮಾಡುವಾಗ ನನ್ನ ತಂದೆ ಮತ್ತು ನನ್ನ ತಂದೆಯವರ ತಾಯಿ ಅಂದರೆ ಅಜ್ಜಿಯವರು ಬಂದು ನನ್ನ ತಾಯಿಗೆ ಬಾರಕೋಲಿನಿಂದ ಹೊಡೆದರು ಮತ್ತು ಕೆಲಸ ಮಾಡುವುದಕ್ಕೆ ಅಡ್ಡಿ ಪಡಿಸಿ, ಬೈದು ಹೊಲದಲ್ಲಿ ಬರಬೇಡ ಎಂದು ಹೇಳಿದರು. ದಿನಾಂಕ: 09.04.2020 ಕ್ಕೆ ನನ್ನ ತಾಯಿ ಶ್ರೀಮತಿ ರೇಣುಕವ್ವಾ ಅವರು ಬೇವೂರು ಠಾಣೆಗೆ ಹೋಗಿ ದೂರು ಕೊಟ್ಟಾಗ, ಎನ್.ಸಿ.ಆರ್ ನಂ. ಪಿಓ1167200600032 ದಾಖಲೆ ಮಾಡಿದರು. ಇದಾದ ಮೇಲೆ ನಮ್ಮ ತಂದೆಯವರಿಗೆ ಠಾಣೆಗೆ ಕರೆಸಿ ವಿಚಾರಣೆ ಮಾಡಿ, ಹೊಲದಲ್ಲಿ ಯಾರು ಕೆಲಸ ನಿರ್ವಹಿಸುತ್ತಿದ್ದರೋ ಅವರೇ ಕೆಲಸವನ್ನು ಮುಂದುವರೆಸಬೇಕೆಂದು ಠಾಣೆಯಲ್ಲಿ ತಿಳಿಸಿದರು. ಆದರೂ ಸಹ ನಮ್ಮ ತಂದೆಯವರು ಸುಮಾರು ಸಲ ಹೊಲದಲ್ಲಿ ಕೆಲಸ ಮಾಡಲು ಅಡ್ಡಿ ಪಡಿಸುತ್ತಿದ್ದರು.
>
> ಈ ಘಟನೆ ನಂತರ 07 ನೇ ತಿಂಗಳು ಅಂದರೆ ಜುಲೈನಲ್ಲಿ ಮತ್ತೆ ನಮ್ಮ ತಂದೆ ನಮಗೆ ಹೊಡೆಯಲು ಮನೆಗೆ ಬಂದರು. ಇದರ ಬಗ್ಗೆ ಬೇವೂರ ಠಾಣೆಯಲ್ಲಿ ದೂರು ಕೊಟ್ಟಾಗ ಠಾಣೆಯ ಎ.ಎಸ್.ಐ ಅವರು ನಮ್ಮ ತಂದೆಯನ್ನು ಕರೆಸಿ ವಿಚಾರಣೆ ಮಾಡಿದರು. ದಿನಾಂಕ: 28.02.2021 ರಂದು ನಾನು ಮತ್ತು ನನ್ನ ತಾಯಿ ಈರುಳ್ಳಿ (ಉಳ್ಳಾಗಡ್ಡಿ) ಕೀಳುವಾಗ ನನ್ನ ತಂದೆ ಬಲಿಸ್ (ದೊಡ್ಡ ಕಟ್ಟಿಗೆ) ತೆಗೆದುಕೊಂಡು ಬಂದು ನನ್ನ ತಾಯಿಗೆ ಹೊಡೆದರು ನಾನು ಪಕ್ಕದಲ್ಲಿ ಇದ್ದ ಕಾರಣ ತಂದೆ

ಹೊಡೆಯುವದನ್ನು ತಡೆಯಲು ಹೋದಾಗ ನನ್ನ ತಂದೆ ನನಗೂ ಕೂಡ ಹೊಡೆದರು. ನಾನು ಮತ್ತು ನಮ್ಮ ತಾಯಿಯವರು ನಮ್ಮ ತಂದೆಯನ್ನು ಕರೆದುಕೊಂಡು ಊರಿನ ಕಲ್ಯಾಣ ಮಂಟಪದಲ್ಲಿ 4 ಜನರ ಮಧ್ಯೆ ಕೂರಿಸಿ, ಬೇವೂರ ಪೊಲೀಸ್ ಠಾಣೆಗೆ ಫೋನ್ ಹಚ್ಚುತ್ತಿರುವಾಗಲು ಸಹ ನನ್ನ ತಂದೆ ಎಲ್ಲ ಜನರ ಸಮಕ್ಷಮದಲ್ಲಿ ನನ್ನ ತಾಯಿಗೆ ಕೈಯಿಂದ ಹೊಡೆದರು. ಪೋಲಿಸ್ ಠಾಣೆಗೆ ಪೋನ್ ಮಾಡಿದಾಗ ಅವರು ಠಾಣೆಗೆ ಬರಲು ತಿಳಿಸಿದರು. ನಾನು ಮತ್ತು ನನ್ನ ತಾಯಿ ಅದೇ ದಿನ ಮಧ್ಯಾಹ್ನ 1.00 ಗಂಟೆಗೆ ಠಾಣೆಗೆ ಹೋದೆವು, ಆಗ ಠಾಣೆಯಲ್ಲಿ ನನ್ನ ತಂದೆಯವರು ಬರುವುದು ತಡ ಆಗುತ್ತದೆ ಎಂದು ಹೇಳಿದ ಕಾರಣ ನಾನು ಮತ್ತು ನನ್ನ ತಾಯಿ ಕೊಪ್ಪಳ ಜಿಲ್ಲಾ ಆಸ್ಪತ್ರೆಗೆ ಹೋಗಿ ಎಮ್.ಎಲ್.ಸಿ ಮಾಡಿಸಿಕೊಂಡೆವು. ಇದಾದ ಮೇಲೆ ಆಸ್ಪತ್ರೆಯಲ್ಲಿಯೇ ಸುಮಾರು 4.30 ಗಂಟೆಯವರೆಗೂ ಕಾದೆವು ಅಲ್ಲದೇ ಬೆಳ್ಳಿಗ್ಗೆ 11.30 ಗಂಟೆಯಿಂದ ಏನು ತಿನ್ನದ ಕಾರಣ ಊಟ ಮಾಡಲು ಹೋದಾಗ ಠಾಣೆಯಿಂದ ಎ.ಎಸ್.ಐ ಶ್ರೀ ಬಸವರಾಜ ಲಾಡಿ ಅವರು ಸಂಜೆ 5.30 ಗಂಟೆಗೆ ಜಿಲ್ಲಾ ಆಸ್ಪತ್ರೆಗೆ ಬಂದರು. ಮತ್ತೆ ನನಗೆ ಬರಲಿಕ್ಕೆ ಪೋನ್ ಮಾಡಿದರು ಇದಾದ ಮೇಲೆ ಶ್ರೀ ಬಸವರಾಜ ಲಾಡಿ ಅವರು ಸಂಜೆ 6.00 ಗಂಟೆಯಾದ ಕಾರಣ ಇವತ್ತು ಬೇಡ ನಾಳೆ ಠಾಣೆಗೆ ಬಂದು ಪಿ.ಎಸ್.ಐ ಮೇಡಮ್‌ಗೆ ಭೇಟಿ ಮಾಡಿ ಎಂದು ತಿಳಿಸಿದರು. ಮಾರನೇ ದಿನ ನಾನು ಮತ್ತು ನನ್ನ ತಾಯಿ ಬೇವೂರ ಠಾಣೆಗೆ ಹೋಗಿ ಪಿ.ಎಸ್.ಐ ಶ್ರೀಮತಿ ಶೀಲಾ ಎಮ್ ಅವರನ್ನು ಭೇಟಿ ಮಾಡಿದೆವು. ದೂರು ಕೊಡಲಿಕ್ಕೆ ಹೋದಾಗ ಪಿ.ಎಸ್.ಐ ಅವರು ದೂರರ್ಜಿಯ ಹೇಳಿಕೆ ಮೇಲೆ 02 ಜನ ಸಾಕ್ಷಿದಾರರ ರುಜು ಹಾಕಿಕೊಂಡು ಬರಲು ತಿಳಿಸಿದರು. 02 ದಿನಗಳ ನಂತರ ಮತ್ತೆ ಠಾಣೆಗೆ ಹೋಗಿ ಮೇಡಮ್‌ಗೆ ದೂರು ಕೊಟ್ಟು ರುಜು ಯಾರು ಹಾಕುತ್ತಿಲ್ಲ ಎಂದು ತಿಳಿಸಿದೆನು. ಪಿ.ಎಸ್.ಐ ಮೇಡಂ ರವರು ಅರ್ಜಿಯನ್ನು ಸ್ವೀಕರಿಸದೇ ಪೋಲಿಸ್ ಶ್ರೀ ಜಗದೀಶ ಅವರಿಗೆ ಭೇಟಿ ಮಾಡಲು ತಿಳಿಸಿದರು. ಶ್ರೀ ಜಗದೀಶ ಅವರು ಆಗ ಠಾಣೆಯಲ್ಲಿ ಇರಲಿಲ್ಲ ಮತ್ತು ಸಂಜೆ 6.00 ಗಂಟೆ ಬರುವುದಕ್ಕೆ ತಿಳಿಸಿದರು. ನಂತರ ಹೋದಾಗ ಪೋಲಿಸ್ I. T Net connection ಇಲ್ಲದ ಕಾರಣ ಪ್ರಕರಣ ತೆಗೆದುಕೊಳ್ಳಲಿಲ್ಲ ಮಾರನೇ ದಿನ ಮತ್ತೆ ಹೋದಾಗ ಪೋಲಿಸ್ I. T Net connection ಇಲ್ಲದ ಕಾರಣ ಪ್ರಕರಣ ತೆಗೆದುಕೊಂಡಿರುವುದಿಲ್ಲ. ಇದಾದ ಮೇಲೆ ಮತ್ತೆ ಮಾರನೇ ದಿನ ಹೋದಾಗ ಮತ್ತೆ ಅದೇ ತರಹ ಹೇಳಿದರು. ಆಗ ನಾನು ಆಯ್ತು ನನಗೆ ನಾನು ಕಂಪ್ಲೇಟ್ ಕೊಟ್ಟಿರುವ ಬಗ್ಗೆ ಸ್ವೀಕೃತಿ ಕೊಟ್ಟು ಪೋಲಿಸ್ I. T Net connection ಕಾರ್ಯನಿರ್ವಹಿಸಿದಾಗ ನನಗೆ ಎಫ್.ಐ.ಆರ್ ಪ್ರತಿ ಕೊಡಲು ತಿಳಿಸಿದೆನು. ಠಾಣೆಯಲ್ಲಿ ಪಿ.ಎಸ್.ಐ ಅವರು ಇಲ್ಲದ ಕಾರಣ ನಾನು ಫೋನ್ ಮುಖಾಂತರ ಪಿ.ಎಸ್.ಐ ಗೆ ನಮ್ಮ ದೂರಿಗೆ ಸ್ವೀಕೃತಿ ಕೊಡುವ ಬಗ್ಗೆ ಹಟ ಮಾಡಿದಾಗ ಪಿ.ಎಸ್.ಐ ಅವರು ಆಯ್ತು ಪೋಲಿಸ್ ದಳವಾಯಿ ಅವರಿಗೆ ನೀವು ದೂರು ಕೊಟ್ಟು ಹೋಗಿ, ಪೋಲಿಸ್ I. T Net connection ಕಾರ್ಯನಿರ್ವಹಿಸಿದಾಗ ನಿಮಗೆ ಎಫ್.ಐ.ಆರ್ ಪ್ರತಿ ಕೊಡುತ್ತೇವೆಂದು ತಿಳಿಸಿದರು. ದಿನಾಂಕ: 13.03.2021 ರಂದು ಹೊಲದಲ್ಲಿ ನನ್ನ ತಾಯಿ ನನ್ನ ಅಕ್ಕ ಮತ್ತು ನಾನು ಶೇಂಗಾ ಬೀಜ ಕಡಾವು ಮಾಡಿ ಅದನ್ನು ಚೀಲದಲ್ಲಿ

ತುಂಬಿಸಿ ಬೈಕ್ ಮೇಲೆ ಇಡುವಾಗ ನನ್ನ ತಂದೆ ಮತ್ತು ಅವರ ಸಂಬಂಧಿಕರು ಬೇರೆ ಕಡೆಯಿಂದ ಬಂದು ನನ್ನ ಮತ್ತು ನನ್ನ ಅಕ್ಕನನ್ನು ಹೊಲ್ಲದ ಸ್ವಲ್ಪ ದೂರದಲ್ಲಿ ಕರೆದುಕೊಂಡು ಹೋಗಿ ನನಗೆ ಮತ್ತು ನನ್ನ ಅಕ್ಕನಿಗೆ ಬಾರಕೋಲಿನಿಂದ ಹೊಡೆದರು ಮತ್ತು ನನ್ನ ತಾಯಿ ಮತ್ತು ನನ್ನ ಅಕ್ಕನಿಗೆ ಲೈಂಗಿಕ ಕಿರುಕುಳ ಹಾಗೂ ತೊಡೆ, ಮೊಣಕಾಲು, ಕೈ ಹಾಗೂ ಮುಂತಾದ ಕಡೆ ಬಾರುಕೋಲು ಮತ್ತು ದೊಡ್ಡ ಕಟ್ಟಿಗೆಯಿಂದ ಹೊಡೆದಿದ್ದಾರೆ. ಇದಾದ ಮೇಲೆ ನಾನು ಬೇವೂರ ಠಾಣೆಗೆ ದೂರು ಕೊಡಲು ಹೋದಾಗ ನನಗೆ ಒಂದು ಗಂಟೆಯವರೆಗೂ ಕಾಯಿಸಿದರು. ನಂತರ ಒಬ್ಬ ಪಿ.ಸಿ ಶ್ರೀ ಶರಣಪ್ಪ ಎಂಬುವವರು ಹೊಲ್ಲಕ್ಕೆ ಬಂದರು. ಅಷ್ಟರಲ್ಲಿ ಹೊಲದಲ್ಲಿ ರಾಶಿ ಇರಲಿಲ್ಲ. ನಮ್ಮ ತಾಯಿ ಮತ್ತು ನಮ್ಮ ಅಕ್ಕ ರಾಶಿ ತೆಗುದುಕೊಂಡು ಹೋಗುತ್ತಿರುವವರ ಹಿಂದೆ ಹೋಗಿರುತ್ತಾರೆ. ನಮ್ಮ ತಾಯಿ ಮತ್ತು ನಮ್ಮ ಅಕ್ಕ ಮಂಗಳೂರು ಆಸ್ಪತ್ರೆ ಹತ್ತಿರ ನಿಂತಿದ್ದು, ನನ್ನನ್ನು ಹಾಗೂ ಪಿ.ಸಿ ಶರಣಪ್ಪ ರವರನ್ನು ನೋಡಿ ನಮ್ಮ ತಾಯಿ ಅವರು ನಮ್ಮ ಜೊತೆ ಬನ್ನಿ ರಾಶಿ ಎಲ್ಲಿ ತೆಗೆದುಕೊಂಡು ಹೋದರೆಂದು ತಿಳಿಸಿತ್ತೇವೆ ಎಂದು ಹೇಳಿದರು. ಅದಕ್ಕೆ ಪಿ.ಸಿ ಶರಣಪ್ಪ ಅವರು ನಮಗೆ ಠಾಣೆಗೆ ಬಂದು ದೂರರ್ಜಿ ನೀಡಲು ತಿಳಿಸಿದರು. ಪಿಎಸ್ಐ ಮೇಡಂ ರವರು ಠಾಣೆಯಲ್ಲಿ ಇಲ್ಲದೇ ಇರುವುದನ್ನು ಅರಿತ ನಾವು ಎ.ಸಿ ಕಚೇರಿಗೆ ಹೋದೆವು. ಎ.ಸಿ ಅವರು ಪುನಃ ಠಾಣೆಗೆ ಹೋಗಲಿಕ್ಕೆ ಹೇಳಿದರು ನಾನು ಆವಾಗ ಠಾಣೆಗೆ ಹೋದಾಗ ಪಿ.ಎಸ್.ಐ ಮೇಡಮ್ ಅವರು, ಬೇವೂರ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆ ಪಡೆದುಕೊಳ್ಳಲು ಹೇಳಿದರು. ಆಸ್ಪತ್ರೆಗೆ ಹೋದಾಗ ವೈದ್ಯರು ಇಲ್ಲದ ಕಾರಣ ಪಿ.ಎಸ್.ಐ ಮೇಡಮ್‌ಗೆ ತಿಳಿಸಿದೆ ಅದಕ್ಕೆ ಪಿ.ಎಸ್.ಐ ಮೇಡಮ್ ಅವರು ಬೇರೆ ಆಸ್ಪತ್ರೆಯ ಸಿಬ್ಬಂದಿಗಳಿಂದ ಪ್ರಥಮ ಚಿಕಿತ್ಸೆ ಮಾಡಿಸಿಕೊಂಡು ಬರಲು ಹೇಳಿದರು. ಅದರಂತೆ ಪ್ರಥಮ ಚಿಕಿತ್ಸೆ ಮಾಡಿಸಿಕೊಂಡು ಬಂದೆ. ಪಿ.ಎಸ್.ಐ ಮೇಡಮ್ ನನಗೆ ಸ್ಟೇಟ್‌ಮೆಂಟ್ ಕೊಡಲು ಹೇಳಿದಾಗ ನಾನು ಪಿ.ಸಿ ರೈಟರ್ ಜಗದೀಶ ಅವರಿಗೆ ಸ್ಟೇಟ್‌ಮೆಂಟ್ ಕೊಡಲು ಹೋದಾಗ ಜಗದೀಶ ಅವರು ನನ್ನ ಹೇಳಿಕೆ ಪ್ರಕಾರ ತೆಗೆದುಕೊಳ್ಳದೇ ಅವರ ಇಷ್ಟದ ಪ್ರಕಾರ ಸ್ಟೇಟ್‌ಮೆಂಟ್ ಬರೆದುಕೊಂಡರು. ನಾನು ಇದರ ಬಗ್ಗೆ ಪಿ.ಎಸ್.ಐ ಮೇಡಮ್‌ಗೆ ತಿಳಿಸಿದಾಗ ಪಿ.ಎಸ್.ಐ ಮೇಡಮ್ ನೀವು ಜಗದೀಶ ಹೇಳಿದ ಪ್ರಕಾರ ಸ್ಟೇಟ್‌ಮೆಂಟ್ ಕೊಡಲು ಹೇಳಿದರು. ಅದಕ್ಕೆ ನಾನು ಆ ರೀತಿ ಸ್ಟೇಟ್‌ಮೆಂಟ್ ಕೊಡುವುದಿಲ್ಲ ಎಂದು ಹೇಳಿದಾಗ ಪಿ.ಎಸ್.ಐ ಮೇಡಮ್ ಹಾಗಾದರೇ ನೀವು ಎ.ಸಿ ಕಡೆ ಹೋಗಿ ಎಂದು ತಿಳಿಸಿದರು. ಆಗ ಸಂಜೆ 7.30 ಗಂಟೆಯಾದ್ದರಿಂದ ನಾನು ಜಗದೀಶ ಅವರು ಯಾವ ರೀತಿ ಟೈಪ್ ಮಾಡಿದರೂ ಅದೇ ತರ ಸ್ಟೇಟ್‌ಮೆಂಟ್ ಬರೆದು ಕೊಡಿ ಎಂದು ನನಗೆ ಹೇಳಿದ್ದಕ್ಕೆ, ನಾನು ಅದೇ ತರ ಸ್ಟೇಟ್‌ಮೆಂಟ್ ಬರೆದು ಕೊಟ್ಟು, ಕೊಪ್ಪಳ ಆಸ್ಪತ್ರೆಗೆ ಚಿಕಿತ್ಸೆಗಾಗಿ ಹೋದೆ. ನನ್ನ ಜೊತೆ ನನ್ನ ತಾಯಿ ಮತ್ತು ನನ್ನ ಅಕ್ಕ ಕೂಡ ಬಂದರು. ವೈದ್ಯಕೀಯ ಚಿಕಿತ್ಸೆ ಮಾಡಿಸಿ ಮನೆಗೆ ಹೋದೆವು. ಎಫ್.ಐ.ಆರ್ ಆದ ಮೇಲೆ ಕೂಡ ಪೋಲಿಸರಿಂದ ಏನು ಕ್ರಮ ಜರುಗಿಸದೇ ಇರುವ ಕಾರಣ ನಮ್ಮ ಹೊಲದಲ್ಲಿ ಎದುರುದಾರರು ಬಂದು ಈರುಳ್ಳಿ ಕೀಳುತ್ತಿದ್ದರು. ಇದನ್ನು ತಿಳಿಸಿದ ನಂತರ ಬೇವೂರ ಪೋಲಿಸರು 02 ದಿನಗಳ ನಂತರ ಎಫ್.ಐ.ಆರ್ ನಲ್ಲಿ ಬರೆದು ಕೊಟ್ಟ 08 ಜನರ ಪೈಕಿ 07 ಜನ ಅಪರಾಧಿಗಳನ್ನು ಪೋಲಿಸ್ ಠಾಣೆಗೆ

ಅರೆಸ್ಟ್ ಮಾಡಿ ಕರೆದುಕೊಂಡು ಬಂದು ಬೇಲ್ ಮೇಲೆ ಬಿಟ್ಟಿರುತ್ತಾರೆ. ಉಳಿದ ಒಬ್ಬರನ್ನು ಈವರೆಗೂ ಬಂಧಿಸಿರುವುದಿಲ್ಲ. ಎದುರುದಾರರು ಹೊಲದಲ್ಲಿ ಕೆಲಸ ಮಾಡಲು ಪ್ರಾರಂಭಿಸಿದರು. ಇದಾದ ಮೇಲೆ ಹೊಲದಲ್ಲಿ ಹೋಗದ ಕಾರಣ ಮತ್ತೆ ಈಗ ಯಾವದೇ ಜಗಳ ಆಗಿಲ್ಲ. ನಾವು ಹೊಲಕ್ಕೆ ಹೋಗದ ಕಾರಣ ಆರಕ್ಷಕ ಉಪಾಧೀಕ್ಷಕರು ಮತ್ತು ಆರಕ್ಷಕ ಅಧೀಕ್ಷಕರು ಕಡೆ ಹೋದೆವು ಆದರೆ ಯಾವ ಬದಲಾವಣೆ ಆಗಿಲ್ಲ ಹಾಗೂ ಆರಕ್ಷಕ ಅಧೀಕ್ಷಕರು ಅವರು ಇಲ್ಲಿಗೆ ಬರಬೇಡಿ ಎಂದು ತಿಳಿಸಿದರು ಹಾಗೂ ಸರ್ಕಲ್ ಇನ್ಸ್‌ಪೆಕ್ಟರ್‌ಗೆ ಪೋನ್ ಮಾಡಿ ತಿಳಿಸುತ್ತೇವೆ ಎಂದು ಹೇಳಿದರು. ನಾವು ಸರ್ಕಲ್ ಇನ್ಸ್‌ಪೆಕ್ಟರ್ ರವರ ಹತ್ತಿರ ಹೋದರು ಸಹ ಯಾವುದೇ ರೀತಿ ಕ್ರಮ ಜರುಗಿಸಿಲ್ಲ. ನಮ್ಮ ಹೊಟ್ಟೆ ಪಾಡಿಗೆ ಏನೂ ಮಾಡಬೇಕೋ ತೋಚುತ್ತಿಲ್ಲ ತುಂಬಾ ಕಷ್ಟವಾಗಿದೆ."

ದಿನಾಂಕ: 14.03.2022 ರಂದು ಶ್ರೀ ಬಸವರಾಜ ಲಾಡಿ ರವರು ನೀಡಿರುವ ಲಿಖಿತ ಸಮಜಾಯಿಷಿಯಲ್ಲಿ ದಿನಾಂಕ: 28.02.2021 ರಂದು ಠಾಣಾಧಿಕಾರಿ ಕರ್ತವ್ಯದಲ್ಲಿದ್ದ ಸಿ.ಹೆಚ್.ಸಿ–72 ಶ್ರೀ ಚನ್ನಪ್ಪ ರವರು ಕೊಪ್ಪಳದಲ್ಲಿ ಎಫ್.ಡಿ.ಎ ಪರೀಕ್ಷೆಯ ಬಂದೋಬಸ್ತ ಕರ್ತವ್ಯದಲ್ಲಿದ್ದ ನನಗೆ ಪೋನ್ ಮೂಲಕ ದೂರುದಾರರಾದ ಶ್ರೀ ನಾಗರಾಜ ರವರು ಕೊಪ್ಪಳ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಬಗ್ಗೆ ತಿಳಿಸಿದ್ದರಿಂದ ನಾನು ಕೊಪ್ಪಳ ಜಿಲ್ಲಾ ಆಸ್ಪತ್ರೆಗೆ ಹೋಗಿ ಶ್ರೀ ನಾಗರಾಜ ಪಟ್ಟಣಶೆಟ್ಟಿ ಸಾ॥ ಮಂಗಳೂರು ಇವರ ಬಗ್ಗೆ ವಿಚಾರಿಸಲಾಗಿ, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳಲು ಅಡ್ಮಿಟ್ ಅಗದೇ ಹೊರ ರೋಗಿಯಾಗಿ ಚಿಕಿತ್ಸೆ ಪಡೆದುಕೊಂಡು ಹೋಗಿರುತ್ತಾರೆ ಎಂದು ಕರ್ತವ್ಯದಲ್ಲಿರುವ ವೈದ್ಯಾಧಿಕಾರಿಗಳು ತಿಳಿಸಿರುತ್ತಾರೆ. ನಂತರ ನಾನು ಮಂಗಳೂರು ಗ್ರಾಮಕ್ಕೆ ಹೋಗಿ ನಾಗರಾಜ ಪಟ್ಟಣಶೆಟ್ಟಿ ಇವರನ್ನು ಭೇಟಿ ಮಾಡಿ ವಿಚಾರಿಸಲಾಗಿ, ಶ್ರೀ ನಾಗರಾಜ ರವರು ನಮ್ಮ ಮತ್ತು ನಮ್ಮ ತಂದೆಯ ಮಧ್ಯ ಬಾಯಿಮಾತಿನ ಜಗಳ ಆಗಿರುತ್ತದೆ ಎಂದು ತಿಳಿಸಿರುತ್ತಾರೆ, ಈ ಬಗ್ಗೆ ಹೇಳಿಕೆ ನೀಡಲು ಕೇಳಿದಾಗ ಸದರಿಯವರು ಖುದ್ದಾಗಿ ಪೊಲೀಸ್ ಠಾಣೆಗೆ ಬಂದು ಹೇಳಿಕೆ ಅಥವಾ ದೂರು ನೀಡುವುದಾಗಿ ತಿಳಿಸಿದರು. ನಾನು ಪೊಲೀಸ್ ಠಾಣೆ ವಾಪಸ್ ಬಂದು ಎಸ್.ಹೆಚ್.ಡಿ ಕರ್ತವ್ಯದಲ್ಲಿದ್ದ ಶ್ರೀ ಚನ್ನಪ್ಪ ರವರಿಗೆ ಆಸ್ಪತ್ರೆಯಿಂದ ತಂದ ಎಮ್.ಎಲ್.ಸಿ ಯನ್ನು ತಾಬಾಕ್ಕೆ ನೀಡಿ, ಎಸ್.ಎಚ್.ಡಿ ಯಲ್ಲಿ ನಮೂದು ಮಾಡಲು ತಿಳಿಸಿ, ಶ್ರೀ ನಾಗರಾಜ ರವರನ್ನು ಕರೆಸಿ ಮುಂದಿನ ಕ್ರಮ ಕೈಗೊಳ್ಳಲು ಹೇಳಿ, ಅಂದು ರಾತ್ರಿ ನನಗೆ ಗಸ್ತು ಉಸ್ತುವಾರಿ ಕರ್ತವ್ಯವಿದ್ದುದರಿಂದ ನಾನು ಹೋಗಿರುತ್ತೇನೆ.

ನಂತರ ದಿನಾಂಕ: 13.03.2021 ರಂದು ದೂರುದಾರರ ತಂದೆಯಾದ ಶ್ರೀ ಮುದುಕಪ್ಪ, ಈರಮ್ಮ ಮತ್ತು ಅವರ ಇತರೇ 05 ಜನ ಸಂಬಂಧಿಕರ ಮೇಲೆ ಬೇವೂರು ಪೊಲೀಸ್ ಠಾಣೆಯಲ್ಲಿ ಗುನ್ನೆ ನಂ.

19/2021 ಕಲಂ: 143, 147, 148, 323, 324, 504, 506 ಸಹಿತ 149 ಐ.ಪಿ.ಸಿ ರಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿರುತ್ತದೆ. ಪ್ರಕರಣದ ತನಿಖೆಯನ್ನು ಪೂರೈಸಿ ಆಯೋಪಿತರ ವಿರುದ್ಧ ದೋಷಾರೋಪಣ ಪತ್ರ ಸಲ್ಲಿಸಿದ್ದು, ಪ್ರಕರಣವು ನ್ಯಾಯಾಲಯದಲ್ಲಿ ವಿಚಾರಣೆ ಹಂತದಲ್ಲಿರುತ್ತದೆ.

ನಾನು ದೂರುದಾರರಿಗೆ ತೀವ್ರವಾಗಿ ಸ್ಪಂದಿಸಿದ್ದು ಅಲ್ಲದೇ ನಾನು ಬಂದೋಬಸ್ತ ಕರ್ತವ್ಯದಲ್ಲಿ ಇರುವಾಗ್ಯೂ ಕೂಡಾ ತಮಗಾದ ತೊಂದರೆಗೆ ಸಂಬಂಧಿಸಿದಂತೆ ಆಸ್ಪತ್ರೆಗೆ ಭೇಟಿ ಕೊಟ್ಟಿದ್ದು ಅಲ್ಲದೇ ಮಂಗಳೂರಿಗೆ ಸಹ ಹೋಗಿ ವಿಚಾರಿಸಿದ್ದು ಇರುತ್ತದೆ. ನಾಗರಾಜ ಇವರಿಗೂ ಕೂಡ ಠಾಣೆಗೆ ಬಂದು ದೂರು ನೀಡಲು ತಿಳಿಸಿರುತ್ತೇನೆ. ಆದರೆ ನಾನು ಅವರ ದೂರನ್ನು ಸ್ವೀಕರಿಸುವಲ್ಲಿ ವಿಳಂಬ ಮಾಡುವುದಾಗಲಿ ಅಥವಾ ನಿರಾಕರಿಸುವದಾಗಲಿ ಮಾಡಿರುವುದಿಲ್ಲ. ಮತ್ತು ನನ್ನ ಕರ್ತವ್ಯದಲ್ಲಿ ಯಾವುದೆ ನಿರ್ಲಕ್ಷ್ಯತನ ತೋರಿರುವುದಿಲ್ಲ. ಸದರಿ ಅರ್ಜಿದಾರರು ನನ್ನ ವಿರುದ್ದ ಮಾಡಿದ ಆಪಾದನೆಗಳು ಸತ್ಯಕ್ಕೆ ದೂರವಾಗಿದ್ದು ನನ್ನ ವಿರುದ್ದ ಸಲ್ಲಿಸಿದ ಸದರಿ ಅರ್ಜಿಯನ್ನು ಆಪಾದನೆಯಿಂದ ಮುಕ್ತಗೊಳಿಸುವಂತೆ ಅವರ ಲಿಖಿತ ಸಮಜಾಯಿಷಿಯಲ್ಲಿ ಪ್ರಾರ್ಥಿಸಿರುತ್ತಾರೆ.

ದಿನಾಂಕ: 14.03.2022 ರಲ್ಲಿ ಶ್ರೀ ಅಯ್ಯನಗೌಡ ರವರು ದಿನಾಂಕ: 11.03.2022 ರ ಪೊಲೀಸ್ ಅಧೀಕ್ಷಕರು, ಕೊಪ್ಪಳ ರವರು ನೀಡಿರುವ ವರದಿಯಲ್ಲಿ ದಿನಾಂಕ: 28.02.2021 ರಂದು ದೂರುದಾರಾದ ಶ್ರೀ ನಾಗರಾಜ ರವರು ಆತನ ತಂದೆ ಶ್ರೀ ಮುದಕಪ್ಪ ಪಟ್ಟಣಶೆಟ್ಟಿ ಇವರಿಂದ ಹಲ್ಲೆಗೊಳಗಾಗಿ, ಜಿಲ್ಲಾ ಆಸ್ಪತ್ರೆಯಿಂದ ಸದರಿ ಹಲ್ಲೆ ಬಗ್ಗೆ ಎಂ.ಎಲ್.ಸಿ ಮಾಹಿತಿ ನೀಡಿದ್ದು, ಬೇವೂರ ಪೊಲೀಸ್ ಠಾಣೆಯ ಎ.ಎಸ್.ಐ ಶ್ರೀ ಬಸವರಾಜ ಲಾಡಿ(ನಿವೃತ್ತ) ರವರು ಕೊಪ್ಪಳ ಜಿಲ್ಲಾ ಆಸ್ಪತ್ರೆಗೆ ಭೇಟಿ ನೀಡಿ ಎಂ.ಎಲ್.ಸಿ ಮಾಹಿತಿಯನ್ನು ಸ್ವೀಕರಿಸಿಕೊಂಡು ಎ.ಎಸ್.ಐ ಶ್ರೀ ಬಸವರಾಜ ಲಾಡಿ ಮತ್ತು ಸದರಿ ದಿನದಂದು ಠಾಣಾಧಿಕಾರಿ ಕರ್ತವ್ಯದಲ್ಲಿದ್ದ ಸಿ.ಹೆಚ್.ಸಿ–72 ಚನ್ನಪ್ಪ ರವರು ಅದರ ಬಗ್ಗೆ ಯಾವುದೇ ವಿಚಾರಣೆ ಹಾಗೂ ಕಾನೂನು ಕ್ರಮ ಕೈಗೊಳ್ಳದೇ ಕರ್ತವ್ಯದಲ್ಲಿ ನಿರ್ಲಕ್ಷತನ ತೋರಿಸಿರುತ್ತಾರೆ. ಕು॥ ಶೀಲಾ ಎಂ. ಪಿ.ಎಸ್.ಐ ಬೇವೂರ ಪೊಲೀಸ್ ಠಾಣೆ ರವರಿಗೆ ವಿವಾದವಿರುವ ಬಗ್ಗೆ ಮಾಹಿತಿ ಇದ್ದರೂ ದಿನಾಂಕ: 13.03.2021 ರ ಪೂರ್ವದಲ್ಲಿ ಯಾವುದೇ ಮುಂಜಾಗ್ರತಾ ಕ್ರಮ ಕೈಗೊಳ್ಳದೇ ಇರುವುದು ಕಂಡು ಬಂದಿರುತ್ತದೆ. ಅಲ್ಲದೇ ಎಂ.ಎಲ್.ಸಿ ಮಾಹಿತಿ ಸ್ವೀಕರಿಸಿದ ನಂತರವೂ ಸಹ ಇಲ್ಲಿಯವರೆಗೆ ಯಾವುದೇ ಕ್ರಮ ಕೈಗೊಳ್ಳದೇ ಕರ್ತವ್ಯದಲ್ಲಿ ನಿರ್ಲಕ್ಷತನದ ಬಗ್ಗೆ ಪಿ.ಐ., ಡಿ.ಆರ್.ಬಿ ಘಟಕ ರವರಿಂದ ತಿಳಿದು ಬಂದಿರುತ್ತದೆ.

ದಿನಾಂಕ: 13.03.2021 ರಂದು ದೂರುದಾರರ ತಾಯಿ ಶ್ರೀಮತಿ ರೇಣುಕಮ್ಮ ಪೊಲೀಸ್ ಠಾಣೆಗೆ ಬಂದು ಗಂಡ ಮತ್ತು ಇತರೇ 07 ಜನರು ಸೇರಿ ಹಲ್ಲೆ ಮಾಡಿರುವ ಬಗ್ಗೆ ಲಿಖಿತವಾಗಿ ದೂರು ನೀಡಿದ್ದನ್ನು ಸ್ವೀಕರಿಸಿಕೊಂಡು ಅದೇ ದಿನ ಆರೋಪಿತನಾದ ಶ್ರೀ ಮುದಕಪ್ಪ ಪಟ್ಟಣಶೆಟ್ಟಿ ಮತ್ತು ಇತರರ ಮೇಲೆ ಬೇವೂರ ಪೊಲೀಸ್ ಠಾಣೆ ಗುನ್ನೆ ನಂ. 19/2021 ಕಲಂ 143, 147, 148, 323, 324, 504, 506 ಸಹಿತ 149 ಐಪಿಸಿ ನೇದ್ದರಲ್ಲಿ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡು ಆರೋಪಿತರ ವಿರುದ್ದ ದೋಷಾರೋಪಣ ಪತ್ರ ಸಲ್ಲಿಸಿ, ಯಲಬುರ್ಗಾ ನ್ಯಾಯಾಲಯದಲ್ಲಿ ಪ್ರಕರಣ ವಿಚಾರಣೆ ಹಂತದಲ್ಲಿರುತ್ತದೆ.

ದೂರುದಾರರ ತಂದೆ ಶ್ರೀ ಮುದಕಪ್ಪ ಪಟ್ಟಣಶೆಟ್ಟಿ ಇವರು ತಮ್ಮ ಪಿತ್ರಾರ್ಜಿತ ಆಸ್ತಿಯ ವಿವಾದಕ್ಕೆ ಸಂಬಂಧಿಸಿದಂತೆ ಸಿವಿಲ್ ಜಡ್ಜ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಯಲಬುರ್ಗಿಯಲ್ಲಿ ಓ.ಎಸ್. ನಂ. 330/2020 ನೇದ್ದರಲ್ಲಿ ಸಿವಿಲ್ ದಾವೆ ಹೂಡಿದ್ದು, ಅರ್ಜಿ ವಿಚಾರಣಾ ಸಮಯದಲ್ಲಿ ದೂರುದಾರರ ತಂದೆಯು ಪಿತ್ರಾರ್ಜಿತ ಆಸ್ತಿಯಲ್ಲಿ ತನ್ನ ಮಗನಿಗೆ ಬರುವ ಪಾಲನ್ನು ಕೊಡಲು ಸಿದ್ಧನಿರುವುದಾಗಿ ಹೇಳಿಕೆ ನೀಡಿದ್ದು, ಅಲ್ಲದೇ ದೂರುದಾರರ ಅಜ್ಜಿ ಶ್ರೀಮತಿ ಈರಮ್ಮ ಪಟ್ಟಣಶೆಟ್ಟಿ ಇವರೂ ಸಹ ತನ್ನ ಮೊಮ್ಮಗನಿಗೆ ಪಿತ್ರಾರ್ಜಿತ ಆಸ್ತಿಯಲ್ಲಿನ ಪಾಲು ಕೊಡಲು ಅಭ್ಯಂತರವಿರುವುದಿಲ್ಲವೆಂದು ಮತ್ತು ನ್ಯಾಯಾಲಯದ ಆದೇಶ ಪಾಲಿಸುವುದಾಗಿ ಹೇಳಿಕೆ ನೀಡಿರುತ್ತಾರೆ.

ಆ ದಿವಸ ಘಟನೆಯ ಸಮಯದಲ್ಲಿ ಕಳ್ಳತನ ಆಗಿರುವುದು ಸಾಬೀತಾಗಿರುವುದಿಲ್ಲ. ಅಲ್ಲದೇ ದಿನಾಂಕ: 28.02.2021 ರಂದು ನಡೆದ ಘಟನೆಯ ಬಗ್ಗೆ ಬೇವೂರು ಪೊಲೀಸ್ ಠಾಣೆಯ ಅಧಿಕಾರಿ ಮತ್ತು ಸಿಬ್ಬಂದಿಯವರು ಕಾನೂನು ಕ್ರಮ ಜರುಗಿಸದೇ ಇದ್ದುದರಿಂದ ಪುನಃ ತನ್ನ ತಂದೆಯು ತನ್ನ ಸಂಬಂಧಿಕರೊಂದಿಗೆ ಬಂದು ದೂರುದಾರರ ತಾಯಿಯ ಮೇಲೆ ಹಲ್ಲೆ ಮಾಡುತ್ತಿರುತ್ತಾರೆ ಎಂಬ ಆರೋಪ ಮಾತ್ರ ನಿಜವಿರುತ್ತದೆ. ಅರ್ಜಿದಾರರು ತನ್ನ ಇಚ್ಛೆಯಂತೆ ಪೊಲೀಸ್ ಅಧಿಕಾರಿಗಳು ಅಥವಾ ಇತರೇ ಇಲಾಖೆಯ ಅಧಿಕಾರಿಗಳು ಕ್ರಮ ಕೈಗೊಳ್ಳದಿದ್ದಕ್ಕೆ ಅಧಿಕಾರಿಗಳ ವಿರುದ್ಧ ಆರೋಪ ಮಾಡುವ ಪ್ರವೃತ್ತಿ ಹೊಂದಿರುವಂತೆ ಕಂಡು ಬಂದಿರುತ್ತದೆ. ಶ್ರೀಮತಿ ಶೀಲಾ, ಪಿ.ಎಸ್.ಐ, ಬೇವೂರ ಪೊಲೀಸ್ ಠಾಣೆ, ಬಸವರಾಜ ಲಾಡಿ, ಎ.ಎಸ್.ಐ(ನಿವೃತ್ತ) ಹಾಗೂ ಅಂದಿನ ಹೆಚ್.ಸಿ–72 ಶ್ರೀ ಚನ್ನಪ್ಪ, ಹಾಲಿ ಪಿ.ಎಸ್.ಐ ಅಳವಂಡಿ ಪೊಲೀಸ್ ಠಾಣೆ ರವರು ಸದರಿ ದೂರುದಾರರಿಗೆ ಸಂಬಂದಿಸಿದಂತೆ ಯಾವುದೇ ಮಾನವ ಹಕ್ಕು ಉಲ್ಲಂಘನೆ ಮಾಡಿರುವುದು ಕಂಡು ಬಂದಿರುವುದಿಲ್ಲ. ದಿನಾಂಕ:

13.03.2021 ರ ಘಟನೆಯ ಪೂರ್ವದಲ್ಲು ಮುಂಜಾಗ್ರತೆವಾಗಿ ಕಲಂ. 107 ಸಿ.ಆರ್.ಪಿ.ಸಿ ಅಡಿ ಅರ್ಜಿದಾರರು ಮತ್ತು ಪ್ರತಿ ಅರ್ಜಿದಾರರ ವಿರುದ್ಧ ಸೂಕ್ತ ಕಾನೂ ಕ್ರಮ ಜರುಗಿಸದೇ ಕರ್ತವ್ಯದಲ್ಲಿ ನಿರ್ಲಕ್ಷತನ ತೋರಿಸಿದ ಕಾರಣ ಸದರಿ ಪೊಲೀಸ್ ಅಧಿಕಾರಿ/ಸಿಬ್ಬಂದಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸುವ ಕುರಿತು ಕಾರಣ ಕೇಳುವ ನೋಟಿಸ್ ಜಾರಿ ಮಾಡಿದ್ದು, ಶಿಸ್ತು ಕ್ರಮದ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ ಎಂದು ವರದಿ ಸಲ್ಲಿಸಿರುತ್ತಾರೆ.

ಮುಂದುವರೆದು, ಶ್ರೀ ಚನ್ನಪ್ಪ ರವರು ದಿನಾಂಕ: 28.02.2021 ರಂದು ನಡೆದ ಘಟನೆಯ ಬಗ್ಗೆ ದೂರುದಾರರಾದ ಶ್ರೀ ನಾಗರಾಜ ರವರು ಎಸ್.ಎಚ್.ಓ ರವರ ಮುಂದೆ ಮಾತನಾಡಿಕೊಂಡು ವ್ಯಾಜ್ಯವನ್ನು ಬಗೆಹರಿಸಿಕೊಂಡಿರುತ್ತಾರೆಂದು ಹಾಗೂ ಇನ್ನು ಮುಂದೆ ಇದೇ ರೀತಿ ಘಟನೆ ಮರುಕಳಿಸಿದರೆ ಕಾನೂನು ಕ್ರಮ ಕೈಗೊಳ್ಳಬೇಕೆಂದು ಬರೆದುಕೊಟ್ಟ ಪತ್ರವನ್ನು ಆಯೋಗಕ್ಕೆ ಸಲ್ಲಿಸಿರುತ್ತಾರೆ. ಆ ಪತ್ರವನ್ನು ಶ್ರೀ ಖಾದರ್‌ರವರು ಶ್ರೀ ಚನ್ನಪ್ಪ ರವರಿಗೆ ನೀಡಿರುತ್ತಾರೆ. ಆದರೆ ಶ್ರೀ ನಾಗರಾಜ ರವರು ಆ ಪತ್ರದಲ್ಲಿರುವ ಸಹಿ ಅವರದಲ್ಲವೆಂದು ಹೇಳಿರುತ್ತಾರೆ. ಆದ್ದರಿಂದ, ಮುಂದಿನ ದಿನಾಂಕದಂದು ದೂರುದಾರಾದ ಶ್ರೀ ನಾಗರಾಜ, ಪಿ.ಎಸ್.ಐ ಶ್ರೀಮತಿ ಶೀಲಾ ಮೂಗನಗೌಡ್ರ, ಹೆಡ್ ಕಾನ್‌ಸ್ಟೇಬಲ್ ಶ್ರೀ ಚನ್ನಪ್ಪ ಹಾಗೂ ಶ್ರೀ ಖಾದರ್ ರವರು ಹಾಜರಾಗುವಂತೆ ತಿಳಿಸಿದ್ದು, ಅದರಂತೆ ದಿನಾಂಕ: 25.04.2022 ರಂದು ಸದರಿಯವರುಗಳು ಆಯೋಗದ ಮುಂದೆ ಹಾಜರಾಗಿದ್ದು, ಶ್ರೀಮತಿ ಶೀಲಾ ಮೂಗನಗೌಡ್ರು, ಪಿ.ಎಸ್.ಐ, ಅಂದಿನ ಹೆಚ್.ಸಿ– 72 ಶ್ರೀ ಚನ್ನಪ್ಪ ಹಾಗೂ ಖಾದರ್ ರವರು ಅವರುಗಳ ಹೇಳಿಕೆಗಳನ್ನು ನೀಡಿದ್ದು, ದೂರುದಾರರಾದ ಶ್ರೀ ನಾಗರಾಜ ರವರು ಅವರ ಮುಂದುವರೆದ ಹೇಳಿಕೆಯನ್ನು ನೀಡಿರುತ್ತಾರೆ.

ದಿನಾಂಕ: 25.04.2022 ರಂದು ಶ್ರೀಮತಿ ಶೀಲಾ ಮೂಗನಗೌಡ್ರು, ಪಿ.ಎಸ್.ಐ ರವರು ನೀಡಿರುವ ಹೇಳಿಕೆ ಈ ಕೆಳಕಂಡಂತೆ ಇರುತ್ತದೆ:

> "ನಾನು 25.1.2020 ರಿಂದ ಪ್ರಸ್ತತ ಇಲ್ಲಿಯವರೆಗೂ ಬೇಗೂರು, ಪೊಲೀಸ್ ಠಾಣೆ, ಯಲಬುರ್ಗ ತಾಲ್ಲೂಕು, ಕೊಪ್ಪಳ ಜಿಲ್ಲೆ ಕಾರ್ಯ ನಿರ್ವಹಿಸುತ್ತಿದ್ದೇನೆ.
>
> ದಿನಾಂಕ.28.02.2021 ರಂದು ನಾನು ಪರವಾನಗಿ ರಜೆ ಮೇಲೆ ಹೋಗಿರುತ್ತೇನೆ. ದಿನಾಂಕ. 01.03.2021 ರಂದು ಶ್ರೀ ನಾಗರಾಜ್ ರವರು ಠಾಣೆಗೆ ದೂರು ಕೊಡಲು ಬಂದಿದ್ದು, ನಾನು ಆ ದೂರನ್ನು ನೋಡಿ ನೀವು ಘಟನೆ ನಡೆದ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಲಿಖಿತವಾಗಿ ಬರೆದು ಕೊಂಡು ಬರಲು ತಿಳಿಸಿದೆ ಹೊರತು ದೂರಿನ ಮೇಲೆ ಇಬ್ಬರ ಸಾಕ್ಷಿಗಳ ರುಜು ಹಾಕಿಸಿ ಕೊಂಡು ತರಬೇಕೆಂದು ನಾನು ತಿಳಿಸಿಲ್ಲ.

ದಿನಾಂಕ.28.02.2021 ರಲ್ಲಿ ನಾನು ಠಾಣೆಯಲ್ಲಿ ಇರಲಿಲ್ಲ. ಮಾರನೇ ದಿನ ದಿನಾಂಕ.01.03.2021 ನಾನು ಠಾಣೆಗೆ ಬಂದಾಗ ಠಾಣೆಯಲ್ಲಿ ಶ್ರೀ ನಾಗರಾಜ್ ರವರು ಇದ್ದರು. ಆಗ ನಾನು ದೂರಿನ ಬಗ್ಗೆ ಸಂಪೂರ್ಣ ಮಾಹಿತಿ ಬರೆದುಕೊಟ್ಟು ಎಫ್.ಐ.ಆರ್ ತೆಗೆದುಕೊಂಡು ಹೋಗಿ ಎಂದು ಹೇಳಿ ನಾನು ನನ್ನ ಗಸ್ತು ಕರ್ತವ್ಯಕ್ಕೆಂದು ಹೋದೆ.

ಇದಾದ ಮೇಲೆ ಶ್ರೀ ನಾಗರಾಜ್ ರವರು ದಿನಾಂಕ.13.03.2021 ರಂದು ಘಟನೆಯಾದ ಮೇಲೆ ಠಾಣೆಗೆ ಬಂದರು ಇದಕ್ಕಿಂತ ಮುಂಚೆ ದಿನಾಂಕ.06.03.2021 ರಂದು ನನಗೆ ಫೋನ್ ಮಾಡಿ ದೂರಿನ ಬಗ್ಗೆ ಸ್ವೀಕೃತಿ ಕೊಡಿ ಎಂದು ಮಾತನಾಡಿರುವ ಬಗ್ಗೆ ನನಗೆ ನೆನಪಿಲ್ಲ. ದಿನಾಂಕ.13.03.2021 ರಂದು ಶ್ರೀ ನಾಗರಾಜ್ ರವರ ಅಕ್ಕ ಮತ್ತು ತಾಯಿ ಯವರು ಠಾಣೆಗೆ ಬಂದಾಗ, ಶ್ರೀ ನಾಗರಾಜ್ ರವರ ಅಕ್ಕ ನಿಂಗಮ್ಮನವರಿಗೆ ತಲೆಗೆ ಪೆಟ್ಟಾಗಿ ರಕ್ತಗಾಯವಾಗಿರುತ್ತದೆ. ಈ ಬಗ್ಗೆ ನಾನು ಠಾಣೆಯ ಪಕ್ಕದಲ್ಲಿರುವ ಪ್ರೈಮರಿ ಹೆಲ್ತ್ ಸೆಂಟರ್‌ಗೆ ನಮ್ಮ ಪೊಲೀಸರೊಂದಿಗೆ ಹೋಗಿ ಪ್ರಥಮ ಚಿಕಿತ್ಸೆ ಮಾಡಿಸಿಕೊಳ್ಳಿ, ನಾವು ಅಲ್ಲಿಗೆ ಬಂದು ದೂರು ತೆಗೆದುಕೊಳ್ಳುತ್ತೇವೆ ಎಂದು ತಿಳಿಸಿದೆ.

ಇದಾದ ಮೇಲೆ ಶ್ರೀ ನಾಗರಾಜ್ ರವರ ಅಕ್ಕ ನಿಂಗಮ್ಮನವರಿಗೆ ತಲೆಗೆ ಜಾಸ್ತಿ ಪೆಟ್ಟಾಗಿ ಗಾಯವಾಗಿದ್ದ ಕಾರಣ ಅವರು ಆಸ್ಪತ್ರೆಗೆ ಹೋಗಿದ್ದರು. ಅಲ್ಲೆ ಇದ್ದ ಶ್ರೀ ನಾಗರಾಜ್ ರವರು ಕೊಟ್ಟ ದೂರಿನ ಸಾರಾಂಶದ ಮೇರೆಗೆ ಪೊಲೀಸ್ ಠಾಣಾ ಗುನ್ನೆ ನಂ.19/2021 ಕಲಂ 134, 147, 148, 323, 324, 504, 506 ರೆ.ವಿ 149 ಐಪಿಸಿ ಪ್ರಕಾರ ಎಫ್. ಐ. ಆರ್ ದಾಖಲು ಮಾಡಿ ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ.

<u>ಪಾಟೀ ಸವಾಲು:</u>

ರೈಟರ್ ಶ್ರೀ ಜಗದೀಶ್ ರವರು ಹೇಳಿದ ಹಾಗೆ ದೂರು ಕೊಡಿ ಎಂದು ಹೇಳುವುದು ಸಾಧ್ಯವಿಲ್ಲ, ಕಾರಣ ದೂರುದಾರರು ಪ್ರತಿಯೊಂದು ವಿಷಯವನ್ನು ತಾವೇ ಬರೆದುಕೊಡುತ್ತಾರೆ. ನಾವು ಗಣೀಕರಿಸಿದ ದೂರಿಗೆ ಯಾವುದೇ ರೀತಿ ಸಹಿ ಹಾಕುವುದಿಲ್ಲ, ಮತ್ತು ಯಾರ ಮೇಲೂ ವಿಶ್ವಾಸ ಹೊಂದಿರುವುದಿಲ್ಲ, ಒಂದು ವೇಳೆ ತಾವು ಹೇಳಿದ ಪಿರ್ಯಾದಿಯಂತೆ ದೂರು ದಾಖಲಿಸಿದೇ ಇದ್ದಲ್ಲಿ, ಸದರಿಯವರು ಹಿರಿಯ ಅಧಿಕಾರಿಗಳ ಬಳಿ ಹೋಗಿರುತ್ತಿದ್ದರು. ಆದಕಾರಣ ಯಾವುದೇ ದೂರನ್ನು ಪೊಲೀಸರು ಗಣೀಕರಿಸಿರುವುದಿಲ್ಲ, ಪಿರ್ಯಾದುದಾರರೇ ಲಿಖಿತವಾಗಿ ದೂರನ್ನು ಕೊಟ್ಟಿರುತ್ತಾರೆ."

ದಿನಾಂಕ: 25.04.2022 ರಂದು ಅಂದಿನ ಹೆಡ್ ಕಾನ್‌ಸ್ಟೇಬಲ್ ಶ್ರೀ ಚನ್ನಪ್ಪ ರವರು ನೀಡಿರುವ ಹೇಳಿಕೆ ಈ ಕೆಳಕಂಡಂತೆ ಇರುತ್ತದೆ:

"ನಾನು ಕಳೆದ 3 ವರ್ಷಗಳ ಹಿಂದೆ ಬೇಗೂರು, ಪೊಲೀಸ್ ಠಾಣೆ, ಯಲಬುರ್ಗ ತಾಲ್ಲೂಕು, ಕೊಪ್ಪಳ ಜಿಲ್ಲೆ ಕಾರ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕ.28.02.2021 ರಂದು ನಾನು ಎಸ್.ಹೆಚ್.ಓ ಆಗಿ ಬೇಗೂರು ಪೋಲೀಸ್ ಠಾಣೆಯಲ್ಲಿ ಮದ್ಯಾಹ್ನ 2 ಗಂಟೆ ಯಿಂದ ರಾತ್ರಿ 9 ಗಂಟೆಯವರೆ ಕರ್ತವ್ಯ ನಿರ್ವಹಿಸುತ್ತಿದ್ದೆ. ಮದ್ಯಾಹ್ನ 2 ರಿಂದ 3 ಗಂಟೆಗೆ ಕೊಪ್ಪಳ ಜಿಲ್ಲೆ ಆಸ್ಪತ್ರೆಯಿಂದ ಒಂದು ಕರೆ ಬಂದಿದ್ದು, ಶ್ರೀ ನಾಗರಾಜ್ ರವರ ಕುಟುಂಬದವರ ಕಡೆಯಿಂದ ಎಂ.ಎಲ್.ಸಿ ಬಗ್ಗೆ ಇಂಟಿಮೇಷನ್ ಬಂದಿದೆ ಎಂದು ಕರೆ ಬಂದ ಪ್ರಕಾರ ಎ.ಎಸ್.ಐ ಶ್ರೀ ಬಸವರಾಜ್ ಲಾಡಿ ರವರಿಗೆ ಆಸ್ಪತ್ರೆಗೆ ಕಳುಹಿಸಿ ಎಂ.ಎಲ್.ಸಿ ಘಟನೆ ಬಗ್ಗೆ ವಿಚಾರಣೆ ಮಾಡಲು ಹೇಳಿದೆ. ಶ್ರೀ ಬಸವರಾಜ್ ಲಾಡಿ ಅವರು ಆಸ್ಪತ್ರೆಗೆ ಹೋಗಿ ಶ್ರೀ ನಾಗರಾಜ್ ಮತ್ತು ಅವರ ಪರವಾಗಿ ಎಂ.ಎಲ್.ಸಿ ಘಟನೆ ಬಗ್ಗೆ ಹೇಳುವವರು ಯಾರು ಇಲ್ಲವೆಂದು ತಿಳಿಸಿದರು. ಅವರು ಮಾರನೆ ದಿನ ಮುಂಜಾನೆ ಠಾಣೆಗೆ ಬರುವಂತೆ ಬಸವರಾಜ್ ಲಾಡಿ ರವರು ನಾಗರಾಜ್ ರವರಿಗೆ ತಿಳಿಸಿದರು.

ಶ್ರೀ ಖಾದರ್ ರವರು ನಮ್ಮ ಠಾಣೆಯ ಪೋಲೀಸರಿಗೆ ಯಾವುದಾದರೂ ನೋಟೀಸ್ ಅಥವಾ ವಾರೆಂಟ್ ಜಾರಿ ಮಾಡಲು ಸಹಾಯ ಮಾಡುತ್ತಿರುತ್ತಾರೆಂದು ಅವರಿಗೆ ಬೇಗೂರು ಪೋಲೀಸ್ ಠಾಣೆಯ ಎಲ್ಲಾ ಸಿಬ್ಬಂದಿಗಳು ಪರಿಚಯವಿದೆ. ಅದಕ್ಕಾಗಿ ನಾನು ಅವರಿಗೆ ಈ ಪ್ರಕರಣದ ಬಗ್ಗೆ ಮಾನವ ಹಕ್ಕುಗಳ ಆಯೋಗದಿಂದ ನೋಟೀಸ್ ಜಾರಿ ಮಾಡಲು ಶ್ರೀ ನಾಗರಾಜ್ ರವರನ್ನು ಕೇಳಿದಾಗ, ಅವರು ನನಗೆ ನಾಗರಾಜ್ ರವರ ತಂದೆಯವರು ರಾಜಿಯಾಗಿದ್ದಾರೆ ಮತ್ತು ಇದರ ಬಗ್ಗೆ ಒಂದು ಪತ್ರವನ್ನು ಶ್ರೀ ನಾಗರಾಜ್ ಬರೆದುಕೊಟ್ಟಿದ್ದಾರೆಂದು ತಿಳಿಸಿ, ಖಾದರ್ ರವರೇ ತಂದು ಕೊಟ್ಟರು. ಈ ಪತ್ರ ನನಗೆ ಸಿಕ್ಕ ಮೇಲೆ ದಿನಾಂಕ.14.03.2022 ರಂದು ಮಾನವ ಹಕ್ಕುಗಳ ಆಯೋಗದ ಮುಂದೆ ಹಾಜರು ಪಡಿಸಿರುತ್ತೇನೆ."

ದಿನಾಂಕ: 25.04.2022 ರಂದು ಶ್ರೀ ಖಾದರ್ ರವರು ನೀಡಿರುವ ಹೇಳಿಕೆ ಈ ಕೆಳಕಂಡಂತೆ ಇರುತ್ತದೆ:

"ಶ್ರೀ ಶರಣಪ್ಪ ಪಿಸಿ ರವರು ಆಯೋಗದಿಂದ ಶ್ರೀ ನಾಗರಾಜ್ ರವರಿಗೆ ನೋಟೀಸ್ ಬಂದಿದ್ದು ಅದನ್ನು ಜಾರಿ ಮಾಡಬೇಕೆಂದು ತಿಳಿಸಿದ ಮೇರೆಗೆ, ನನಗೆ ಶ್ರೀ ನಾಗರಾಜ್ ರವರ ಮನೆ ಗೊತ್ತಿದ್ದರಿಂದ ದಿನಾಂಕ. 11.03.2021ರಂದು ಶ್ರೀ ನಾಗರಾಜ್ ರವರ ಮನೆಯ ಅಡ್ರಸ್‌ಗೆ ಕರೆದುಕೊಂಡು ಹೋದೆ, ನೋಟೀಸ್ ಜಾರಿ ಮಾಡಿ ಮನೆಗೆ ಹೋಗುವಾಗ ಶ್ರೀ ನಾಗರಾಜ್ ರವರ ತಂದೆ ಮುದುಕಪ್ಪ ಪಟ್ಟಣ್ಣಶೆಟ್ಟಿ ರವರು ನನ್ನನ್ನು ಬಜಾರ್ ನಲ್ಲಿ ನೋಡಿ, ನಾಗರಾಜ್ ಮನೆಗೆ ಏಕೆ ಹೋಗಿದ್ದಿ ಎಂದು ಕೇಳಿದರು, ಆಗ ಮಾನವ ಹಕ್ಕು ಆಯೋಗದಿಂದ ನಾಗರಾಜ್ ರವರಿಗೆ ನೋಟೀಸ್ ಬಂದಿತ್ತು ಅದನ್ನು ಜಾರಿ ಮಾಡುವ ಸಲುವಾಗಿ ಅವರ ಮನೆ ತೋರಿಸಲು ಹೋಗಿದ್ದೆ ಎಂದು ಹೇಳಿದೆ. ಆಗ ನಾಗರಾಜ್ ರವರ ತಂದೆ ಮತ್ತು ಅವರುಗಳ ಮದ್ಯೆ ರಾಜಿ ಮಾಡಿಕೊಂಡಿದ್ದೇವೆಂದು ತಿಳಿಸಿದರು. ಅದಕ್ಕೆ ನಾನು ಡಾಕುಮೆಂಟರಿ ಪ್ರೂಫ್ ಕೊಡಿ ಎಂದು ತಿಳಿಸಿದಾಗ ಅವರು ಮನೆಯಿಂದ ಶ್ರೀ ನಾಗರಾಜ್ ರವರು ದಿನಾಂಕ. 28.02.2021 ರಂದು ಬರೆದು ಕೊಟ್ಟ ಪತ್ರವನ್ನು ನನಗೆ ಕೊಟ್ಟರು.

ದಿನಾಂಕ.13.02.2022 ರಂದು ನಾನು ಈ ಪತ್ರವನ್ನು ಎ.ಎಸ್.ಐ ಶ್ರೀ ಚನ್ನಪ್ಪ ನವರಿಗೆ ಕೊಟ್ಟಿದ್ದೇನೆ. ಈ ಪತ್ರವನ್ನು EX-M1 ಎಂದು ನಮೂದಿಸಲಾಗಿದೆ."

ದಿನಾಂಕ: 25.04.2022 ರಂದು ದೂರುದಾರರಾದ ಶ್ರೀ ನಾಗರಾಜ ರವರು ನೀಡಿರುವ ಮುಂದುವರೆದ ಹೇಳಿಕೆ ಈ ಕೆಳಕಂಡಂತೆ ಇರುತ್ತದೆ:

"ಈ ದಿನ ಆಯೋಗದ ಮುಂದೆ ಎ.ಎಸ್.ಐ ಶ್ರೀ ಚನ್ನಪ್ಪ ರವರು ಹಾಜರು ಪಡಿಸಿರುವ ದಿನಾಂಕ.28.02.2021ರ ಪತ್ರವನ್ನು ನೋಡಿದ್ದೇನೆ. ಈ ಪತ್ರವನ್ನು EX-M1 ಎಂದು ನಮೂದಿಸಿದ್ದಾರೆ. ಈ ಪತ್ರವನ್ನು ನಾನು ಬರೆದುಕೊಟ್ಟಿಲ್ಲ ಮತ್ತು ಈ ಪತ್ರದ ಮೇಲೆ ಮಾಡಿರುವ ರುಜು ನನ್ನದ್ದಲ್ಲ."

ದೂರು, ವರದಿಗಳು. ಅಭಿಪ್ರಾಯ, ಹೇಳಿಕೆಗಳು ಹಾಗೂ ಪ್ರಕರಣಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ಪರಿಶೀಲಿಸಲಾಗಿ, ದಿನಾಂಕ: 28.02.2021 ರಂದು ದೂರುದಾರಾದ ಶ್ರೀ ನಾಗರಾಜ ರವರು ಆತನ ತಂದೆ ಶ್ರೀ ಮುದಕಪ್ಪ ಪಟ್ಟಣಶೆಟ್ಟಿ ಇವರಿಂದ ಹಲ್ಲೆಗೊಳಗಾಗಿ, ಕೊಪ್ಪಳ ಜಿಲ್ಲಾ ಆಸ್ಪತ್ರೆಯಿಂದ ಸದರಿ ಹಲ್ಲೆ ಬಗ್ಗೆ ಎಂ.ಎಲ್.ಸಿಯ ಮಾಹಿತಿ ನೀಡಿದ್ದು, ಸದರಿ ಮಾಹಿತಿಯನ್ನು ಬೇವೂರ ಪೊಲೀಸ್ ಠಾಣೆಯ ಎಸ್.ಎಚ್.ಓ ಆದ ಶ್ರೀ ಚನ್ನಪ್ಪ ರವರು ಬೇವೂರ ಪೊಲೀಸ್ ಠಾಣೆಯ ಎ.ಎಸ್.ಐ ಶ್ರೀ ಬಸವರಾಜ ಲಾಡಿ(ನಿವೃತ್ತ) ರವರಿಗೆ ಮಾಹಿತಿ ನೀಡಿದ್ದು, ಶ್ರೀ ಬಸವರಾಜ ಲಾಡಿ ರವರು ಕೊಪ್ಪಳ ಜಿಲ್ಲಾ ಆಸ್ಪತ್ರೆಗೆ ಭೇಟಿ ನೀಡಿ ಎಂ.ಎಲ್.ಸಿ ಮಾಹಿತಿಯನ್ನು ಸ್ವೀಕರಿಸಿಕೊಂಡು ಎ.ಎಸ್.ಐ ಶ್ರೀ ಬಸವರಾಜ ಲಾಡಿ ಮತ್ತು ಸದರಿ ದಿನದಂದು ಠಾಣಾಧಿಕಾರಿ ಕರ್ತವ್ಯದಲ್ಲಿದ್ದ ಸಿ.ಹೆಚ್.ಸಿ-72 ಚನ್ನಪ್ಪ ರವರು ಅದರ ಬಗ್ಗೆ ಯಾವುದೇ ವಿಚಾರಣೆ ಹಾಗೂ ಕಾನೂನು ಕ್ರಮ ಕೈಗೊಳ್ಳದೇ ಇದ್ದು ಕರ್ತವ್ಯದಲ್ಲಿ ನಿರ್ಲಕ್ಷತನ ತೋರಿಸಿರುತ್ತಾರೆ.

ಶ್ರೀಮತಿ ಶೀಲಾ ಮೂಗನಗೌಡ್ರು, ಪಿ.ಎಸ್.ಐ ಬೇವೂರ ಪೊಲೀಸ್ ಠಾಣೆ ರವರಿಗೆ ದೂರುದಾರರ ಹಾಗೂ ಅವರ ತಂದೆಯವರ ನಡುವೆ ವಿವಾದವಿರುವ ಬಗ್ಗೆ ಮಾಹಿತಿ ಇದ್ದರೂ ದಿನಾಂಕ: 13.03.2021 ರ ಪೂರ್ವದಲ್ಲಿ ಯಾವುದೇ ಮುಂಜಾಗ್ರತಾ ಕ್ರಮ ಕೈಗೊಳ್ಳದೇ ಇರುವುದು ಹಾಗೂ ದಿನಾಂಕ 28-02-2021 ರ ಘಟನೆಯ ಸಂಬಂಧ ಎಂ.ಎಲ್.ಸಿ ಮಾಹಿತಿ ಸ್ವೀಕರಿಸಿದ ನಂತರವೂ ಸಹ ಯಾವುದೇ ಕ್ರಮ ಕೈಗೊಳ್ಳದೇ ಕರ್ತವ್ಯದಲ್ಲಿ ನಿರ್ಲಕ್ಷತನ ತೋರಿಸಿರುವುದು ವಿಚಾರಣ ಕಾಲದಲ್ಲಿ ಕಂಡು ಬಂದಿರುತ್ತದೆ.

ಆದ್ದರಿಂದ ಶ್ರೀಮತಿ ಶೀಲಾ ಮೂಗನಗೌಡ್ರು, ಪಿ.ಎಸ್.ಐ ಬೇವೂರ ಪೊಲೀಸ್ ಠಾಣೆ ಹಾಗೂ ಅಂದಿನ ಹೆಚ್. ಸಿ–72 ಶ್ರೀ ಚನ್ನಪ್ಪ, ಹಾಲಿ ಎ.ಎಸ್.ಐ ಅಳವಂಡಿ ಪೊಲೀಸ್ ಠಾಣೆ ರವರ ಮೇಲೆ ಇಲಾಖಾ ವಿಚಾರಣೆ ಮಾಡಿ ಅಗತ್ಯ ಕ್ರಮ ವಿಧಿಸುವಂತೆ ಪೊಲೀಸ್ ಮಹಾ ನಿರ್ದೇಶಕರು ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಬೆಂಗಳೂರು ರವರಿಗೆ ಶಿಫಾರಸ್ಸು ಮಾಡಲಾಗಿದೆ.

ಆದೇಶದ ಪ್ರತಿಯನ್ನು ಪೊಲೀಸ್ ಮಹಾ ನಿರ್ದೇಶಕರು ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಬೆಂಗಳೂರು ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸುವುದು.

ಮೇಲ್ಕಂಡ ಶಿಫಾರಸ್ಸನ್ನು ಮಾನವ ಹಕ್ಕುಗಳ ರಕ್ಷಣಾ ಅಧಿನಿಯಮ 1993, ಕಲಂ 18(ಇ) ಪ್ರಕಾರ ಶಿಫಾರಸ್ಸಿನ ಪ್ರತಿ ತಲುಪಿದ ಒಂದು ತಿಂಗಳ ಒಳಗಾಗಿ ಅನುಪಾಲನಾ ವರದಿಯನ್ನು ಪೊಲೀಸ್ ಮಹಾ ನಿರ್ದೇಶಕರು ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಬೆಂಗಳೂರು ರವರು ಆಯೋಗಕ್ಕೆ ಸಲ್ಲಿಸತಕ್ಕದ್ದು.

ಮುಂದುವರೆದು, ಶಿಫಾರಸ್ಸಿನಿಂದ ಬಾಧಿತರಾದ ಪೊಲೀಸ್ ಸಿಬ್ಬಂದಿರವರು ನಿಯಮ 22 ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ (ಪ್ರಕ್ರಿಯೆ) ನಿಯಮಾವಳಿ 2020 ರಂತೆ ಅಭಿಪ್ರಾಯ/ಶಿಫಾರಸ್ಸನ್ನು ತಿದ್ದುಪಡಿಗೆ ಅಥವಾ ಮರು ಪರಿಶೀಲನೆಗೆ ಅರ್ಜಿಯನ್ನು ಆಯೋಗಕ್ಕೆ ಸಲ್ಲಿಸಿದರೆ ಅದನ್ನು ನಿಯಮಾನುಸಾರ ಪರಿಶೀಲನೆ ಮಾಡಲಾಗುವುದೆಂದು ಅಭಿಪ್ರಾಯ/ಶಿಫಾರಸ್ಸು ಮಾಡಲಾಗಿದೆ.

ಪ್ರಕರಣವನ್ನು ದಿನಾಂಕ 28–07–2022 ರಂದು ಅನುಪಾಲನಾ ವರದಿಗಾಗಿ ಮಂಡಿಸುವುದು.

Sd/-
(ಆರ್.ಕೆ ದತ್ತ)
ಸದಸ್ಯರು

ಜಿ.ಎಸ್